# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಿತ್ತೂರ.

## ಸಿ.ಸಿ. ನಂಃ 362/2022

ಪಿರ್ಯಾದಿಃ ಶ್ರೀ ನಾಗೇಶ ತಂದೆ ಸಿದ್ದರಾಯಪ್ಪ ತೇಗೂರ

ವಿರುದ್ಧ

ಆರೋಪಿಃ ಶ್ರೀ ಎಲ್. ರಾಜಾ ತಂದೆ ಎಲ್. ಪಕೀರಾ ನಾಯ್ಕು

ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ

ಪ್ರ1: ಇದುವರೆಗೂ ವಿಚಾರಣೆ ಮಾಡಲಾದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉಃ

ಪ್ರ2: ಫ್ರಾಸಾ-1 ಶ್ರೀ ನಾಗೇಶ ತಂದೆ ಸಿದ್ದರಾಯಪ್ಪ ತೇಗೂರ ರವರು ಸಾಕ್ಷಿ ನುಡಿಯುತ್ತಾ ಆರೋಪಿಯಾದ ನಿಮಗೆ ಫಿರ್ಯಾದುದಾರರು ಹಾಗೂ ಅವರ ಸ್ನೇಹಿತ ಶ್ರೀ ಉತ್ತಮ ತಂದೆ ಪಾಂಡು ಬೈಲೂರ ಇವರು ಕಬ್ಬು ಕಠಾವು ಮಾಡುವ ಕೆಲಸಕ್ಕಾಗಿ ರೂ.7,00,000/- ಗಳನ್ನು (ಫೋನ ಪೇ ಹಾಗೂ ನಗದು ರೂಪದಲ್ಲಿ ) ಅಡ್ವಾನ್ಸ/ ಮುಂಗಡ ಹಣವಾಗಿ ನೀಡಿದ್ದು, ಸದರಿ ಸಾಲದ ಹಣದ ಮರುಪಾವತಿಗಾಗಿ ಆರೋಪಿಯು ತನಗೆ ಸ್ಟೇಟ ಬ್ಯಾಂಕ ಆಫ್ ಇಂಡಿಯಾ, ಶಾಖೆ ಹೊಸಪೇಟ ಕಂಪ್ಲಿ ರೋಡ ಮಲಪನಗುಡಿ, ಇದರ ಚೆಕ್ ನಂ.482403 ದಿನಾಂಕಃ 16.05.2022 ರ ರೂ.7,00,000/- ಗಳ ಚೆಕ್ಕನ್ನು ನೀಡಿರುವುದಾಗಿ ಹೇಳಿದ್ದಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉಃ

ಪ್ರ3: ಫಿರ್ಯಾದಿ ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ತಾನು ಆರೋಪಿಯಾದ ನೀವು ಸಲ್ಲಿಸಿದ ಚೆಕ್ಕನ್ನು ತನ್ನ ಬ್ಯಾಂಕರ್ ಆದ ಕೆನರಾ ಬ್ಯಾಂಕ್, ಶಾಖೆ ಕಿತ್ತೂರ ಇಲ್ಲಿಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ 'Funds Insufficient' ಎಂಬ ಕಾರಣಕ್ಕೆ ಸದರಿ ಚೆಕ್ಕು ದಿನಾಂಕ 27.05.2022 ರಂದು ನಿಪಿ-2 ಹಿಂಬರಹದೊಂದಿಗೆ ಮರಳಿರುವುದಾಗಿ ಹೇಳಿದ್ದಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉಃ

ಪ್ರ.4: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ಆ ಬಳಿಕ ತಾನು ಸದರಿ ವಿಷಯವನ್ನು ಆರೋಪಿಯಾದ ನಿಮಗೆ ತಿಳಿಸಿದರೂ ಕೂಡಾ ನೀವು ಹಣವನ್ನು ಮರುಪಾವತಿಸದೇ ಇದ್ದ ಕಾರಣ ತಾನು ದಿನಾಂಕ 06.06.2022 ರಂದು ಆರೋಪಿಯಾದ ನಿಮಗೆ ನಿಪಿ-3 ರಂತೆ ತಿಳುವಳಿಕೆ ಪತ್ರವನ್ನು ನೀಡಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಬೇಕೆಂದು ಕೇಳಿದರೂ ಸಹ ನೀವು ಚೆಕ್ಕಿನ ಹಣವನ್ನು ಮರಳಿಸಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ನಿಮ್ಮ ಉತ್ತರವೇನು?

ಉಃ

ಪ್ರ.5: ಫ್ರಾಸಾ-1ರವರು ಮುಂದುವರೆದು, ಆರೋಪಿಯಾದ ನೀವು ಕಾನೂನು ಬದ್ಧವಾಗಿ ಅವರಿಗೆ ಕೊಡಬೇಕಾದ ಹಣವನ್ನು ಕೊಡದೇ ಮೋಸ ಮಾಡಬೇಕೆಂಬ ಉದ್ದೇಶದಿಂದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದಿದ್ದರೂ ಬೋಗಸ್ ಚೆಕ್ಕನ್ನು ಕೊಟ್ಟು 138 ಎನ್.ಐ. ಆ್ಯಕ್ಟ್ ಅಡಿಯಲ್ಲಿ ಮೋಸ ಮಾಡಿದ್ದೀರಿ ಎಂಬುದಾಗಿ ಹೇಳುತ್ತಾರೆ. ಈ ಬಗ್ಗೆ ನಿಮಗೆ ಏನಾದರೂ ವಿವರಣೆ ನೀಡುವುದಿದೆಯೇ ?

ಉಃ

ಪ್ರ6: ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ7: ನಿಮ್ಮ ಪರ ಯಾರಾದರೂ ಸಾಕ್ಷಿ ಇದ್ದಾರೆಯೇ?

ಉಃ

(ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಮಾಡಿಕೊಂಡಿದ್ದು ಅವರು ಹೇಳಿದ ಉತ್ತರವನ್ನು ಯಥಾವತ್ತಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಕಿತ್ತೂರ.

ಆರೋಪಿ ಸಹಿಃ